ಕರ್ನಾಟಕ ಸರ್ಕಾರ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಆಯುಕ್ತರ ಕಛೇರಿ, ನಂ.16-ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ,
ಮಿಲ್ಲರ್ಸ್ ಕೆರೆ ಅಂಗಳ, ವಸಂತನಗರ, ಬೆಂಗಳೂರು-560052.

# ವಿದ್ಯಾರ್ಥಿಗಳಿಗೆ ಸೂಚನೆಗಳು (Instructions to Candidates)

2021-22ನೇ ಸಾಲಿಗೆ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ NEET ಹಾಗೂ JEE(mains & advanced) ಪರೀಕ್ಷಾ ಪೂರ್ವ ತರಬೇತಿಯನ್ನು ಉಚಿತವಾಗಿ ನೀಡುತ್ತಿದ್ದು, ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ Online ಮೂಲಕ ಅರ್ಜಿ ಆಹ್ವಾನ.

(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಅಭ್ಯರ್ಥಿಗಳು ಈ ಇಲಾಖೆಯಿಂದ ನೀಡುವ ತರಬೇತಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ)

ಸಂಖ್ಯೆ:ಹಿಂವಕಇ/ತರಬೇತಿ-4/ಸಿಇಟಿ/ಸಿ.ಆರ್-5/2021-22 ದಿನಾಂಕ:27.12.2021.

1. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು, ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಅಥವಾ 3(ಬಿ) ಗೆ ಸೇರಿರಬೇಕು.
2. **ತರಬೇತಿಯನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾತ್ರ ನೀಡುತ್ತಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರಥಮ ಪಿ.ಯು.ಸಿ/10+1 ಅನ್ನು (ವಿಜ್ಞಾನ ವಿಭಾಗದಲ್ಲಿ) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.**
3. ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯ ಮಿತಿ ರೂ.6.00 ಲಕ್ಷಗಳು.
4. **ವಿದ್ಯಾರ್ಹತೆ:-** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸದರಿ ಪರೀಕ್ಷಾ ಪೂರ್ವ ತರಬೇತಿಗಳನ್ನು ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ/10ನೇ ತರಗತಿ ಪೂರ್ಣಗೊಳಿಸಿರಬೇಕು. ಎಸ್.ಎಸ್.ಎಲ್.ಸಿ/10ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದು.
5. ಅರ್ಹ ಆಸಕ್ತ ವಿದ್ಯಾರ್ಥಿಗಳು online ಮೂಲಕವೇ ಅರ್ಜಿಗಳನ್ನು ಸಲ್ಲಿಸುವುದು. ಬೇರೆ ಯಾವ ಪ್ರಕಾರಗಳಲ್ಲೂ ಸಲ್ಲಿಸುವ ವಿದ್ಯಾರ್ಥಿಯ ಅರ್ಜಿಯನ್ನಾಗಲಿ ಅಥವಾ ಮನವಿಯನ್ನಾಗಲಿ ಪರಿಗಣಿಸಲಾಗುವುದಿಲ್ಲ.
6. CBSE ಮತ್ತು ICSE ಹಾಗೂ ಇತರೆ ರಾಜ್ಯಗಳಲ್ಲಿ (1 ರಿಂದ 10ನೇ ತರಗತಿಯ ವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಮಾತ್ರ) ಹತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ಮತ್ತು ಸದರಿ ಕಾರ್ಯಕ್ರಮದಡಿ ತರಬೇತಿಗೆ ಅರ್ಹರಿರುವ ವಿದ್ಯಾರ್ಥಿಗಳು 10ನೇ ತರಗತಿಯ ವಿವರಗಳನ್ನು entry ಮಾಡಿಸಲು ತಮ್ಮ ಮನವಿ ಪತ್ರದೊಂದಿಗೆ ಕೆಳಕಂಡ ದಾಖಲೆಗಳ ಪ್ರತಿಯೊಂದಿಗೆ ಮೇಲ್ಕಂಡ ವಿಳಾಸದಲ್ಲಿರುವ ಕಛೇರಿಗೆ ಭೇಟಿ ನೀಡಿ 10ನೇ ತರಗತಿಯ ವಿವರಗಳನ್ನು ನಮೂದಿಸಿಕೊಂಡು ನಂತರ ತರಬೇತಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.
   ಅ. ಎಸ್.ಎಸ್.ಎಲ್.ಸಿ/10ನೇ ತರಗತಿ ಅಂಕಪಟ್ಟಿ.
   ಆ. ಜಾತಿ ಮತ್ತು ಆದಾಯ ದೃಢೀಕರಣ ಪತ್ರ.
   ಇ. 2021-22ನೇ ಸಾಲಿನಲ್ಲಿ ಪ್ರಥಮ ಪಿ.ಯು.ಸಿ/10+1 (ವಿಜ್ಞಾನ ವಿಭಾಗ) ಕ್ಕೆ ಪ್ರವೇಶ ಪಡೆದಿರುವ ಬಗ್ಗೆ ಪ್ರವೇಶ ಶುಲ್ಕದ ರಸೀದಿಗಳು. (Admission Receipts).

ಈ. 2021–22ನೇ ಸಾಲಿನಲ್ಲಿ ಪ್ರಥಮ ಪಿ.ಯು.ಸಿ/10+1 ರ ವಿಜ್ಞಾನ ವಿಭಾಗದಲ್ಲಿ ಪ್ರವೇಶವನ್ನು ಪಡೆದಿದ್ದು, ಪ್ರಸಕ್ತ ಅಧ್ಯಯನ ಮಾಡುತ್ತಿರುವ ಬಗ್ಗೆ ಸಂಬಂಧಪಟ್ಟ ಕಾಲೇಜಿನಿಂದ ದೃಢೀಕರಣ ಪ್ರಮಾಣ ಪತ್ರ (ನಮೂನೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ).

7. **ತರಬೇತಿಯ ಪಠ್ಯಕ್ರಮ, ತರಬೇತಿ ಅವಧಿ:** ಪ್ರಥಮ ವರ್ಷದಲ್ಲಿ ತರಬೇತಿಗೆ ಆಯ್ಕೆಯಾಗುವ ವಿದ್ಯಾರ್ಥಿಗೆ ಪ್ರಥಮ ಪಿ.ಯು.ಸಿ/10+1 ಗೆ ಹಾಗೂ ನಂತರದಲ್ಲಿ ದ್ವಿತೀಯ ಪಿ.ಯು.ಸಿ/10+2 ಗೆ ಸಂಬಂಧಿಸಿದಂತೆ NEET ಹಾಗೂ JEE (mains & advanced) ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುವುದು.
8. ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಹಾಗೂ ಅದರ ಕೆಳಗೆ ವಿದ್ಯಾರ್ಥಿಯ ಸಹಿ ಬರುವಂತೆ JPEG/JPG format (15 ರಿಂದ 30 kilo byte ಒಳಗಿರುಬೇಕು) ನಲ್ಲಿ Upload ಮಾಡಬೇಕು.
9. ಅದೇ ರೀತಿ ಅರ್ಜಿಯಲ್ಲಿ ಅಪ್‌ಲೋಡ್ ಮಾಡಲು ತಿಳಿಸಿರುವ ಪ್ರತಿ ದಾಖಲೆಗಳನ್ನು JPEG/JPG format (200 ರಿಂದ 250 kilo byte ಒಳಗಿರಬೇಕು) ನಲ್ಲಿ Upload ಮಾಡಬೇಕು.
10. ವಿದ್ಯಾರ್ಥಿಯು ಅಂತಿಮವಾಗಿ ಅರ್ಜಿಯನ್ನು submit ಮಾಡುವ ಮುನ್ನ ಎಲ್ಲಾ ಅಂಶಗಳೂ ಸರಿಯಾಗಿರುವ ಬಗ್ಗೆ Preview ನೋಡಿ ಖಚಿತ ಪಡಿಸಿಕೊಳ್ಳಬೇಕು. ಸರಿಯಾಗಿ ಭರ್ತಿ ಮಾಡದೇ ಇರುವ, ದಾಖಲೆಗಳನ್ನು ಸಲ್ಲಿಸದಿರುವ ಹಾಗೂ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11. ವಿದ್ಯಾರ್ಥಿಯು ತಪ್ಪು ಮಾಹಿತಿ ನೀಡಿರುವುದು/ಅನರ್ಹ ವಿದ್ಯಾರ್ಥಿಯೆಂದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಅಂತಹ ವಿದ್ಯಾರ್ಥಿಯ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.
12. ಅರ್ಜಿಯ ಪ್ರತಿಯನ್ನು Print option ನೀಡುವ ಮೂಲಕ ಪಡೆಯಬಹುದು.
13. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ದಿನಾಂಕ:24.01.2022 ರೊಳಗೆ ಅರ್ಜಿಯ ಒಂದು ಪ್ರತಿ ಮತ್ತು ಅಪ್‌ಲೋಡ್ ಮಾಡಲು ತಿಳಿಸಿರುವ ಎಲ್ಲಾ ದಾಖಲೆಗಳ ಒಂದು ಸೆಟ್ ದೃಢೀಕೃತ ಪ್ರತಿಗಳು ಹಾಗೂ ಅವುಗಳ ಮೂಲ ಪ್ರತಿಗಳೊಂದಿಗೆ ಮೇಲ್ಕಂಡ ವಿಳಾಸದಲ್ಲಿನ ಆಯುಕ್ತರ ಕಛೇರಿಗೆ ಹಾಜರಾಗಿ, ಮೂಲ ದಾಖಲೆಗಳ ಪರಿಶೀಲನೆ ಮಾಡಿಸಿಕೊಳ್ಳುವುದು. ದಾಖಲೆಗಳ ಪರಿಶೀಲನೆಯ ನಂತರ ಒಂದು ಸೆಟ್ ಜೆರಾಕ್ಸ್ ಪ್ರತಿಯನ್ನು ಮಾತ್ರ ಸದರಿ ಕಛೇರಿಗೆ ಸಲ್ಲಿಸುವುದು. ಪರಿಶೀಲನೆಯ ನಂತರ ವಿದ್ಯಾರ್ಥಿಗಳು ತಮ್ಮ ಮೂಲ ದಾಖಲೆಗಳನ್ನು ತಪ್ಪದೇ ತಕ್ಷಣ ಹಿಂದಕ್ಕೆ ಪಡೆದುಕೊಳ್ಳುವುದು. ವಿದ್ಯಾರ್ಥಿಗಳ ಯಾವುದೇ ಮೂಲ ದಾಖಲೆಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ.

ಮೂಲ ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ತರಬೇಕಾದ ದಾಖಲೆಗಳು:-

- ಆನ್‌ಲೈನ್ ಅರ್ಜಿ ಪ್ರತಿ.
- ಎಸ್.ಎಸ್.ಎಲ್.ಸಿ/10ನೇ ತರಗತಿ ಅಂಕ ಪಟ್ಟಿ.
- ಜಾತಿ ಮತ್ತು ಆದಾಯ ದೃಢೀಕರಣ ಪತ್ರ.
- ವಿಶೇಷ ಚೇತನ ವಿದ್ಯಾರ್ಥಿಯಾಗಿದ್ದಲ್ಲಿ ಆ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
- 2021–22ನೇ ಸಾಲಿನಲ್ಲಿ ಪ್ರಥಮ ಪಿ.ಯು.ಸಿ/10+1 (ವಿಜ್ಞಾನ ವಿಭಾಗ) ರಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಪ್ರವೇಶ ಶುಲ್ಕದ ರಸೀದಿಗಳು (Admission Receipts).

- ಪ್ರಥಮ ಪಿ.ಯು.ಸಿ/10+1ರಲ್ಲಿ (ವಿಜ್ಞಾನ ವಿಭಾಗ) ಓದುತ್ತಿರುವ ಬಗ್ಗೆ ಕಾಲೇಜಿನಿಂದ ನೀಡಿರುವ ಗುರುತಿನ ಚೀಟಿ (Identity Card) ಅಥವಾ ಪ್ರಥಮ ಪಿ.ಯು.ಸಿ/10+1 ರ ವಿಜ್ಞಾನ ವಿಭಾಗದಲ್ಲಿ ಪ್ರವೇಶವನ್ನು ಪಡೆದಿದ್ದು, ಪ್ರಸಕ್ತ ಅಧ್ಯಯನ ಮಾಡುತ್ತಿರುವ ಬಗ್ಗೆ ಸಂಬಂಧಪಟ್ಟ ಕಾಲೇಜಿನಿಂದ ದೃಢೀಕರಣ ಪ್ರಮಾಣ ಪತ್ರ (ನಮೂನೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ).
- ರೂ.20/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ.

14. ಭೌತಿಕ ಗುರಿಯನ್ನು ಅನುದಾನ ಲಭ್ಯತೆಗನುಗುಣವಾಗಿ ನಿಗದಿಪಡಿಸಲಾಗುವುದು. ಪ್ರವರ್ಗವಾರು ಮೀಸಲಾತಿ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ಪ್ರವರ್ಗ | ಶೇಕಡ |
|---|---|---|
| 1 | 1 | 15% |
| 2 | 2ಎ | 53% |
| 3 | 3ಎ | 15% |
| 4 | 3ಬಿ | 17% |
| | ಒಟ್ಟು | 100% |

ಯಾವುದೇ ಪ್ರವರ್ಗದಲ್ಲಿ/ಮೀಸಲಾತಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಉಳಿಕೆಯಾಗುವ ಸ್ಥಾನಗಳನ್ನು ಪ್ರವರ್ಗವಾರು ಮತ್ತು ಮೀಸಲಾತಿಯನ್ವಯ ಉಳಿದ ಪ್ರವರ್ಗಗಳಿಗೆ ಮರು ಹಂಚಿಕೆ ಮಾಡಲಾಗುವುದು.

15. ವಿದ್ಯಾರ್ಥಿಗಳು ತರಬೇತಿಯನ್ನು ಮಧ್ಯಂತರದಲ್ಲಿ ಬಿಟ್ಟು ಹೋದಲ್ಲಿ/ತರಬೇತಿಯನ್ನು ಪೂರ್ಣಗೊಳಿಸದಿದ್ದಲ್ಲಿ, ಅವರ ತರಬೇತಿಗೆ ಆಗಿರುವ/ಅಗುವ ವೆಚ್ಚವನ್ನು ಅಂತಹ ವಿದ್ಯಾರ್ಥಿಗಳು/ಪೋಷಕರಿಂದ ವಸೂಲಾತಿ ಮಾಡಲಾಗುವುದು.
16. Online ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:23.01.2022 ರ ಸಂಜೆ 5:00 ಗಂಟೆ.
17. ವಿದ್ಯಾರ್ಥಿಗಳಿಗೆ ಒಂದು ಸೆಟ್ ಕೋರ್ಸ್ ಮೆಟಿರಿಯಲ್‌ಗಳನ್ನು ಸಂಸ್ಥೆಗಳಿಂದ ಉಚಿತವಾಗಿ ನೀಡಲಾಗುವುದು.
18. ಪ್ರಥಮ ಪಿ.ಯು.ಸಿ/10+1 ಗೆ 280 ಗಂಟೆಗಳು (ಅಂದಾಜು 7 ರಿಂದ 10 ತಿಂಗಳ ಅವಧಿ) ದ್ವಿತೀಯ ಪಿ.ಯು.ಸಿ/10+2ಗೆ 280 ಗಂಟೆಗಳು (ಅಂದಾಜು 7 ರಿಂದ 10 ತಿಂಗಳ ಅವಧಿ) ತರಬೇತಿ ನೀಡಲಾಗುವುದು.
19. ತರಬೇತಿಯು ಉಚಿತವಾಗಿದ್ದು ವಿದ್ಯಾರ್ಥಿಗಳ ಶುಲ್ಕವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಾವತಿಸಲಾಗುವುದು.

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.